# ರಂಗಕಲಾವಿದೆಯರು ಮತ್ತು ಚಳವಳಿಗಳು

## (ಮೈಸೂರು ಸಂಸ್ಥಾನ ಮತ್ತು ಅಖಂಡ ಕರ್ನಾಟಕವನ್ನು ಅನುಲಕ್ಷಿಸಿ)

**ರವಿ ಎನ್. ಸಿ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ.

**Received: 24-11-2023 ; Acepted: 24-03-2024 ; Published: 13-08-2024**

**DOI: https://doi.org/10.5281/zenodo.13294375**

**ABSTRACT:**

ಅನೇಕ ರಂಗಕಲಾವಿದೆಯರು ಬದುಕಿನ ಅನಿವಾರ್ಯತೆಗಾಗಿ, ಮತ್ತೆ ಕೆಲವರು ಅಭಿವ್ಯಕ್ತಿಯ ತುಡಿತದಿಂದಾಗಿ ರಂಗಭೂಮಿಗೆ ಪ್ರವೇಶಿಸಿದವರು. ಕಲಾದೃಷ್ಟಿಯಿಂದ ತಮ್ಮ ವೃತ್ತಿಯಲ್ಲಿ ಅಮೋಘವಾದದ್ದನ್ನು ಸಾಧಿಸಿದ್ದಾರೆ. ಕೆಲವರು ಬದುಕಿನ ಅನಿವಾರ್ಯತೆಯಿಂದ ಉಪಜೀವನಕ್ಕಾಗಿ ಎಂಬಂತೆ ಇದನ್ನು ಆರಂಭದಲ್ಲಿ ಆಶ್ರಯಿಸಬೇಕೆಂಬ ಹಂಬಲದಿಂದ ಬಂದವರು ಕೂಡ ವೃತ್ತಿ ರಂಗಭೂಮಿಯ ಹಿನ್ನೆಲೆಯಲ್ಲಿ ಇವರು ಸಾಧಿಸಿದ್ದ ಕಲಾಸಾದನೆ ಬೆಟ್ಟದಷ್ಟು ಎಂಬುವುದನ್ನು ಮರೆಯಬಾರದು. ಅನೇಕರು ಬಣ್ಣ ಬಳಿದು ಕಲೆಯೆಂಬ ಸಾಧನಾ ಪಥದಲ್ಲಿ ಸಿದ್ಧಿ ಕಾಣಬೇಕೆಂಬ ಅಪೇಕ್ಷೆಯಿಲ್ಲದೆ ರಂಗಭೂಮಿಗೆ ಪ್ರವೇಶಿಸಿದರೂ ಕೂಡ ನಂತರ ತಮ್ಮ ಬದುಕಿನ ದಡ ಮುಟ್ಟಲು ತಡಕಾಡಿದರೂ ಕೂಡ ಅವರಿಗರಿವಿಲ್ಲದೆ ಕಲಾಲೋಕದಲ್ಲಿ, ತಾವಾರಿಸಿಕೊಂಡ ಬಣ್ಣದ ಲೋಕದ ಕಲಾ ಪ್ರಪಂಚದಲ್ಲಿ ಗುರುತರವಾದ ಹೆಜ್ಜೆಗುರುತುಗಳನ್ನು ಮೂಡಿಸಿದ್ದಾರೆ. ಅನೇಕ ರಂಗಕಲಾವಿದೆಯರಿಗೆ ರಂಗಜೀವನ ಅದು ತಮಗೆ ಬದುಕಿನ ಒಂದು ಭಾಗ ಎಂದು ಭಾವಿಸಿದ್ದರು ಅನೇಕ ಸಂದರ್ಭಗಳಲ್ಲಿ ವೃತ್ತಿನಾಟಕ ಕಂಪನಿಗಳಲ್ಲಿ ಅಧ್ಯಯನದ ಇತಿಹಾಸದಲ್ಲಿ ಕಲಾದೃಷ್ಟಿಯಿಂದ ರಂಗಕಲಾವಿದೆಯರೇ ಕಂಪನಿಯಾಗಿ, ಅಥವಾ ಕಂಪನಿಯೇ ರಂಗಕಲಾವಿದೆಯರಾಗಿ ಕಾಣಿಸಿಕೊಂಡಿರುವುದುಂಟು. ಯಾಂತ್ರಿಕ ಜಗತ್ತಿನಲ್ಲಿ ಬೇಸತ್ತ ಮನುಷ್ಯ, ರಂಗಭೂಮಿಯ ಕಲಾ ಪ್ರಕಾರದಲ್ಲಿ ನೂತನತೆಯನ್ನು ಬಯಸಿದಾಗ ಆ ಕಾರಣಕ್ಕಾಗಿಯೇ ಪೌರಾಣಿಕ, ಐತಿಹಾಸಿಕ, ಧಾರ್ಮಿಕ, ಭಕ್ತಿಪ್ರಧಾನವಾದ, ಸಾಮಾಜಿಕ ವಸ್ತುಗಳುಳ್ಳ ಹೊಸ ಅಲೆಯ ನಾಟಕಗಳಲ್ಲಿ ರಂಗಕಲಾವಿದೆಯರು ಅಭಿನಯಿಸಿ ನೂತನತೆಯನ್ನು ಸಾಧಿಸಿದ್ದಾರೆ.

**KEYWORDS:**

ಅನಿವರ್ತತೆ, ಕಲಾದೃಷ್ಟಿ, ಹೆಜ್ಜೆಗುರುತು, ಹೊಟ್ಟೆಪಾಡು, ಸ್ವಾತಂತ್ರ್ಯಚಳವಳಿ, ಪ್ರಭುತ್ವ, ಅಸ್ತಿತ್ವ, ಕ್ರಿಯಾತ್ಮಕ, ಏಕೀಕರಣ, ದೇಶಭಕ್ತಿ.

ವೃತ್ತಿ ರಂಗಭೂಮಿ ತನ್ನ ಹೊಟ್ಟೆ ಪಾಡನ್ನು ನಾಟಕಗಳ ಅಭಿನಯದ ಮೂಲಕ ನೀಗಿಸಿಕೊಳ್ಳುವಾಗ ಮನೋರಂಜನೆಗೆ ಒತ್ತುಕೊಡಬೇಕಾದುದು ಅನಿವಾರ್ಯವಾಗಿತ್ತು. ಇದರೊಂದಿಗೆ ಸಮಾಜದ ಜೀವಂತ ಸಮಸ್ಯೆಗಳಾದ ಬಡತನ, ಬಾಲ್ಯವಿವಾಹ, ಮೂಢನಂಬಿಕೆ ಮುಂತಾದ ಸಾಮಾಜಿಕ ವಿಚಾರಗಳಿಗೆ ಸಹಜವಾಗಿಯೇ ಒತ್ತುಕೊಡುತ್ತಿದ್ದರು.

ಕಂಪನಿಯಲ್ಲಿರಿಸಿ ಬ್ರಿಟೀಷ್ ಪ್ರಭುತ್ವಕ್ಕೆ ಚಳ್ಳೆಹಣ್ಣು ತಿನ್ನಿಸಿದ ವಿವರಗಳನ್ನು ರಹಿಮಾನವ್ವ ಕಲ್ಮನಿಯಂತಹ ರಂಗಕಲಾವಿದೆಯರು ತಮ್ಮ ಕೃತಿಗಳಲ್ಲಿ ದಾಖಲಿಸುತ್ತಾರೆ. ಇದು ಅಂತಹ ರಾಜಕೀಯ ಬಿಕಟ್ಟಿನ ಸಂದರ್ಭಗಳಲ್ಲೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಒದ್ದಾಡುತ್ತಿರುವಾಗ ರಂಗಕಲಾವಿದೆಯರು ದೇಶದ ಬದ್ಧತೆಗೆ ಈ ಮೂಲಕ ಕ್ರಿಯಾತ್ಮಕವಾಗಿ ಸ್ವಾತಂತ್ರ್ಯ ಚಳುವಳಿಗೆ ತಕ್ಕಮಟ್ಟಿಗಾದರೂ ಪ್ರತಿಕ್ರಿಯಿಸಿದ್ದಾರೆ. ಇನ್ನು ಕರ್ನಾಟಕ ಏಕೀಕರಣದಂತಹ ಚಳವಳಿಗೆ ಕನ್ನಡ ವೃತ್ತಿ ರಂಗಭೂಮಿಯ ಕಲಾವಿದೆಯರು ಪ್ರತಿಕ್ರಿಯಿಸಿ ಮುಖಾ-ಮುಖಿಯಾಗಿರುವ ವಿವರಗಳನ್ನು ಚಿಂದೋಡಿ ಲೀಲಾರಂತಹ ರಂಗಕಲಾವಿದೆಯರು ತಮ್ಮ ಆತ್ಮಕಥೆಗಳಲ್ಲಿ ದಾಖಲಿಸಿದ್ದಾರೆ. ಮಹಾರಾಷ್ಟ್ರಗರು ದಕ್ಷಿಣ ಮಹಾರಾಷ್ಟ್ರ ಎಂದು ಕರೆಯುತ್ತಿದ್ದ ಬೆಳಗಾವಿಯಲ್ಲಿ ಮರಾಠಿ ನಾಟಕಗಳ ಕೀರ್ತಿ ಭರಾಟೆ ಜೋರಾಗಿದ್ದಾಗ ಮರಾಠಿ ಪ್ರಭಾವದಲ್ಲಿ ನಾಟಕ ಸಹೃದಯ ಕೊಚ್ಚಿ ಹೋಗುತ್ತಿದ್ದ ಸಂದರ್ಭಗಳಲ್ಲಿ ಆ ಪ್ರದೇಶಗಳಲ್ಲಿ ಕನ್ನಡ ನಾಟಕಗಳನ್ನು ಕಟ್ಟಿ ನೆಲೆಗೊಳಿಸುವ ಕನ್ನಡಪರ ಕೆಲಸಮಾಡಿರುವ ವಿವರಗಳನ್ನು ಚಿಂದೋಡಿ ಲೀಲಾರಂತಹ ರಂಗಕಲಾವಿದೆಯರು ತಮ್ಮ ಆತ್ಮಕಥೆಗಳಲ್ಲಿ ದಾಖಲಿಸುತ್ತಾರೆ. ಬೆಳಗಾವಿಯ ಸುತ್ತಮುತ್ತಲ ಪ್ರದೇಶಗಳಲ್ಲಿ ಕನ್ನಡ ಭಾಷೆಯನ್ನು ಕಾಯುವ, ಆ ಮೂಲಕ ಅನ್ಯ ಭಾಷೆಯ ಪ್ರಭುತ್ವದ ಕಕ್ಷೆಗೆ ಸಿಲುಕಿದ್ದ ಕನ್ನಡ ನೆಲದ ಪ್ರದೇಶಗಳಲ್ಲಿ ಜಾಗೃತಿ ತುಂಬುವ ಕೆಲಸವನ್ನು ಚಿಂದೋಡಿ ಲೀಲಾರಂತಹ ರಂಗಕಲಾವಿದೆಯರು ದಿಟ್ಟವಾಗಿ, ಸಮರ್ಥವಾಗಿ ಮಾಡಿರುವ ವಿವರಗಳನ್ನು ತಮ್ಮ ಆತ್ಮಕಥೆಗಳಲ್ಲಿ ದಾಖಲಿಸಿದ್ದಾರೆ. ತಮ್ಮ ಈ ಕಾರ್ಯದ ಮೂಲಕ ಎಲ್ಲಾ ಕನ್ನಡ ಪ್ರದೇಶಗಳು ಒಂದು ರಾಜಕೀಯ ಘಟಕವಾಗಿ ಒಂದೇ ಆಡಳಿತ ಕಕ್ಷೆಗೆ ಒಳಗಾಗಿ ಕರ್ನಾಟಕ ಏಕೀಕರಣ ಚಳುವಳಿಗೆ ಇಂಬು ಕೊಡುವ ಪ್ರಯತ್ನಗಳನ್ನು ರಂಗಕಲಾವಿದೆಯರ ಈ ಬಗೆಯ ಕೆಲಸಗಳಲ್ಲಿ ಗುರ್ತಿಸಬಹುದು.

ಕನ್ನಡ ಭಾಷೆಯ ನಾಟಕ ಅದು ಸ್ವತಂತ್ರವಾದುದ್ದಿರಲಿ, ಭಾಷಾಂತರ ಅಥವಾ ರೂಪಾಂತರವಿರಲಿ, ಅಲ್ಲೆಲ್ಲಾ ಕನ್ನಡಪರ ಆಯಾಮಗಳಿದ್ದಾಗ ರಂಗಕಲಾವಿದೆಯರು ತಮ್ಮ ಕನ್ನಡಪರ ಕಾಳಜಿಯೊಂದಿಗೆ ಅಭಿನಯಿಸಿ ಪ್ರೇಕ್ಷಕರಿಗೆ ಕನ್ನಡಪರ ಕಾಳಜಿಯನ್ನು ರವಾನಿಸಿದ್ದಾರೆ. ಕನ್ನಡಪರ, ಕರ್ನಾಟಕದ ಪರ ಕಾಳಜಿಯುಳ್ಳ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಎಚ್ಚಮನಾಯಕ ಮುಂತಾದ ನಾಟಕಗಳಲ್ಲಿ ಆವೇಶದಿಂದ ಅಭಿನಯಿಸಿದ್ದಾರೆ. ಕನ್ನಡದ ನಾಟಕ ಕಂಪನಿಯೊಂದನ್ನು ಕನ್ನಡ ಪರವಾಗಿ ನಡೆಸುವಾಗ ಎದುರಾದ ಸವಾಲುಗಳನ್ನು, ಅವುಗಳನ್ನು ಸಮರ್ಥವಾಗಿ ಎದುರಿಸಿದ ಧೈರ್ಯವನ್ನು, ಕನ್ನಡಪರ ಕಾಳಜಿಯನ್ನು ಉಳಿಸಿಕೊಳ್ಳಲು ಸಮರ್ಥವಾಗಿ ನಿರ್ವಹಿಸಿದ ಬಗೆಯನ್ನು ರಂಗಕಲಾವಿದೆ ಚಿಂದೋಡಿ ಲೀಲಾರಂತಹ ಆತ್ಮಕಥೆಗಳಲ್ಲಿ ನಾವು ಗಮನಿಸಬಹುದು. ಬೆಳಗಾವಿಯಲ್ಲಿ ಥಿಯೇಟರ್ ಅನ್ನು ಸ್ಥಾಪಿಸಿ ಮುನ್ನಡೆಸುವಾಗ ಎಂಥ ಕಠಿಣ ಪ್ರಸಂಗಗಳು ಎದುರಾದರೂ ರಾಜಿಮಾಡಿಕೊಳ್ಳದೆ ಚಿಂದೋಡಿ ಲೀಲಾ ಕನ್ನಡ ಪರವಾದ ಧೀಮಂತಿಕೆಯನ್ನು ಮೆರೆದಿದ್ದಾರೆ. ಏಣಗಿ ಬಾಳಪ್ಪ, ಚಿಂದೋಡಿ ಲೀಲಾರಂತಹ ರಂಗಕಲಾವಿದರ ಕನ್ನಡಪರ ಹೋರಾಟಗಳು ವೃತ್ತಿರಂಗಭೂಮಿಯ ಕನ್ನಡ ಪರವಾದ ಬದ್ಧತೆಯನ್ನು ತೋರಿಸುತ್ತವೆ. ಇದೇ ಸಂದರ್ಭದಲ್ಲಿ ಚಿಂದೋಡಿ ಲೀಲಾರಂತಹ

ರಂಗಕಲಾವಿದೆಯರ ಕನ್ನಡಪರ ಹೋರಾಟ, ಕನ್ನಡಪರ ಕಾಳಜಿಗಳು ಅಕ್ಷರ ಓದು ಬರಹವನ್ನು ಬಲ್ಲ ಇತರೆ ರಂಗಭೂಮಿಯ ಕಲಾವಿದರಲ್ಲಿ ಯಾಕಿರಲಿಲ್ಲ? ಎಂಬ ಪ್ರಶ್ನೆಯು ನಮ್ಮನ್ನು ಕಾಡುತ್ತದೆ. ಪ್ರಗತಿ ಶೀಲ ಪಂಥದ ಕತೆ, ಕಾದಂಬರಿಕಾರರನ್ನು ಹೊರತುಪಡಿಸಿದರೆ ಭಾರತದ ಸ್ವಾತಂತ್ರ್ಯ ಚಳುವಳಿಗೆ ಕನ್ನಡ ಸಾಹಿತ್ಯ ಸ್ಪಂದಿಸಿದ್ದು ಕಡಿಮೆ. ನಾಟಕವನ್ನು ಸಾಹಿತ್ಯ ಕೃತಿಯಾಗಿ ಮಾತ್ರ ನೋಡಿದಾಗ ಇದೇ ಮಾತನ್ನು ಹೇಳಬೇಕಾಗುತ್ತದೆ. ಆದರೆ ಆ ಕಾಲದ ರಂಗಭೂಮಿ (ಅಂದರೆ ಪ್ರಯೋಗ) ಸ್ವಾತಂತ್ರ್ಯ ಚಳವಳಿಗೆ ತನ್ನದೇ ಆದ ಕಾಣಿಕೆ ನೀಡಿದೆ.[1] ಸ್ವಾತಂತ್ರ್ಯ ಚಳವಳಿ ನಡೆಯುತ್ತಿದ್ದ ಕಾಲದಲ್ಲಿ ಆ ಚಳವಳಿಯ ಮಹತ್ವವನ್ನು ಸಾರುವ, ದೇಶಭಕ್ತಿಯನ್ನು ತುಂಬುವ ನಾಟಕಗಳನ್ನು ರಂಗಕಲಾವಿದೆಯರು ಅಭಿನಯಿಸುವಾಗ ಅಂತಹ ನಾಟಕಗಳಿಗೆ ಆಳುವ ಪ್ರಭುತ್ವ ಸುಲಭವಾಗಿ ಅನುಮತಿ ನೀಡುತ್ತಿರಲಿಲ್ಲ. ನಾಟಕ ಪ್ರದರ್ಶನಕ್ಕೆ ಮೊದಲು ಅಧಿಕಾರಿಗಳಿಂದ ಲೈಸನ್ಸ್ ಪಡೆಯುವ ನಿಯಮ ಕಡ್ಡಾಯವಾಗಿತ್ತು. ಲೈಸನ್ಸ್ ಪಡೆದುಕೊಳ್ಳುವಾಗ ನಾಟಕದ ಹಸ್ತಪ್ರತಿಗಳನ್ನು ಬ್ರಿಟೀಷ್ ಅಧಿಕಾರಿಗಳ ಪರಿಶೀಲನೆಗೆ ಒಪ್ಪಿಸಬೇಕಾಗಿತ್ತು. ಆ ಹಸ್ತಪ್ರತಿಯಲ್ಲಿ ಅನುಮಾನಾಸ್ಪದ ಸಂಗತಿಗಳು ಬ್ರಿಟೀಷ್ ಅಧಿಕಾರಿಗಳಿಗೆ ಕಂಡುಬಂದರೆ ಪ್ರದರ್ಶನಕ್ಕೆ ಅನುಮತಿ ದೊರೆಯುತ್ತಿರಲಿಲ್ಲ. ಆಗ ಕಂಪನಿ ಮಾಲೀಕರು ಮತ್ತು ನಾಟಕಕಾರರು ಮತ್ತು ಕಲಾವಿದರು ಕೆಲವೊಮ್ಮೆ ಆ ನಾಟಕದ ಶೀರ್ಷಿಕೆಗಳನ್ನು ಬದಲಿಸಿ ನಾಟಕದ ಹಸ್ತಪ್ರತಿಯನ್ನು ಮರು ಪರಿಶೀಲನೆಗೆ ಒಪ್ಪಿಸುತ್ತಿದ್ದರು. ಕೆಲವೊಮ್ಮೆ ಆ ಹಸ್ತಪ್ರತಿಗಳನ್ನು ಸರಿಯಾಗಿ ಓದದ ಆಂಗ್ಲ ಅಧಿಕಾರಿಗಳು ಅನುಮತಿ ನೀಡುತ್ತಿದ್ದರು. ಆದರೆ ನಾಟಕ ಪ್ರದರ್ಶನವಾಗುವಾಗ ಅವರಿಗೆ ಅನುಮಾನ ಬಂದರೆ ನಾಟಕ ಬದಲಾಯಿಸುವಂತೆ ತಾಕೀತು ಮಾಡುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಸಹಮತ ಇದ್ದ ಕೆಲವು ಅಧಿಕಾರಿಗಳೂ ಇದ್ದರು. ಅಂತಹ ಅಧಿಕಾರಿಗಳು 'ನಾಟಕದ ಹೆಸರು ಬದಲಾಯಿಸಿ ಆಡಿಕೊಳ್ಳಿರಿ...' ಎಂದು ತಾವೇ ಕಂಪನಿ ಮಾಲೀಕರಿಗೆ ಗುಟ್ಟಾಗಿ ಬೆಂಬಲಿಸಿದ್ದೂ ಇದೆ. ಕೆಲವು ಸಂಸ್ಥಾನಗಳಲ್ಲಿ ಲೈಸನ್ಸ್ ಪಡೆಯುವುದು ಸುಲಭವಿದ್ದರೆ ಮತ್ತೆ ಕೆಲವೆಡೆ ಕಷ್ಟವಾಗುತ್ತಿತ್ತು.[2] ಸ್ವಾತಂತ್ರ್ಯ ಚಳುವಳಿಯ ಆಶಯ ಹೊತ್ತ, ದೇಶಭಕ್ತಿಯ ಕಿಡಿ ಹೊತ್ತಿಸುವ ಸಂಭಾಷಣೆಗಳಿರುವ ನಾಟಕಗಳನ್ನು ಪ್ರದರ್ಶಿಸುವಾಗ ಕೆಲಕಾಲ ನಾಟಕ ನಡೆಸುವುದು, ನಿಲ್ಲಿಸುವುದು, ಪ್ರಭುತ್ವಕ್ಕೆ ಹೆದರಿ ಮತ್ತೆ ನಿಲ್ಲಿಸುವುದು, ಮತ್ತೆ ನಾಟಕಗಳ ಶೀರ್ಷಿಕೆಗಳನ್ನು ಬದಲಿಸಿ ಹೋರಾಡಿ ಲೈಸನ್ಸ್ ಪಡೆದು ನಾಟಕ ನಡೆಸಿರುವುದನ್ನು ಹಲವು ರಂಗಕಲಾವಿದೆಯರು ತಮ್ಮ ಆತ್ಮಕಥೆಗಳಲ್ಲಿ ಪ್ರಸ್ತಾಪಿಸಿದ್ದಾರೆ.

ರಂಗಕಲಾವಿದೆ ರಹಿಮಾನವ್ವ ಕಲ್ಮನಿಯವರು ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಕೊಂಡ ದೇಶಭಕ್ತರಿಗೆ ರಕ್ಷಣೆ ನೀಡುತ್ತಿದ್ದುದ್ದನ್ನು ಅವರ ಮಗ ರಂಗಕಲಾವಿದ ಬಾಬಣ್ಣ ಪ್ರಸ್ತಾಪಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದ ಕಾಲ, ನನಗಾಗ ಹತ್ತೋ ಹನ್ನೆರಡೋ ವರ್ಷ. ೧೯೪೨-೧೯೪೩ನೇ ಇಸವಿ ಇರಬೇಕು. ಸ್ವಾತಂತ್ರ್ಯ ಚಳುವಳಿ ಭಾಳ ತುರುಸಿನಿಂದ ನಡೆದಿತ್ತು. ಭಾಳ ಹೋರಾಟಗಾರರು ಬ್ರಿಟೀಷರ ವಿರುದ್ಧ ಹೋರಾಡುತ್ತಾ ಅವರ ಕೈಗಿ ಸಿಗದಂಗ ತಲೆ ಮರೆಸಿಕೊಂಡು ಅಡವಿಯಾಗ ಇರತಿದ್ರು. ಅವ್ವನದು ಕಂಪನಿ ಇತ್ತು. ಅಡವಿಯಾಗ ಅಡಗಿ ಕುಂತ ಹೋರಾಟಗಾರರಿಗೆ ಕಂಪನಿಯಿಂದ ಬುತ್ತಿ, ಹಣ ಹೋಗುತ್ತಿತ್ತು.

ಪೋಲೀಸರು ಬೆನ್ನುಹತ್ತಿಕೊಂಡು ಬಂದ್ರ ಸೀದಾ ನಮ್ಮ ನಾಟಕ ಕಂಪನಿಗೆ ಬಂದುಬಿಡೋರು. ಅವರಿಗೆಲ್ಲಾ ಕಪನಿ ಹಾಕಿಸಿ, ಗಂಟೆಹೊಡೆಸುತ್ತಾ ಕುಂದರಿಸುತಿದ್ಲು. ಪೋಲೀಸರೇನಾದರೂ ಒಳಬಂದು 'ಏ ಕೌನ್ ಹೈ' ಎಂದರೆ 'ಏ ಸಬ್ ಪಾರ್ಟ್ ಕರನೆವಾಲೆ ಹೈ' ಎಂದು ಹೇಳಿಬಿಡತಿದ್ಲು. ಪೋಲೀಸರು ವಾಪಸ್ಸು ಹೋಗೋರು. ಹೋರಾಟಗಾರರು ನೆಮ್ಮದಿಯಿಂದ ಇರೋರು. ಆ ದಿನದಾಗ ಈ ಭಾಗ ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿತ್ತು. ಹಿಂದಿ-ಉರ್ದುಗಳದ್ದೇ ಮಾತು. ನಿಜಾಮರು, ರಜ಼ಕಾರರು ಕುದುರಿಮ್ಯಾಲಗಸ್ತು ತಿರುಗೋರು. ಅವರು ತುಂಬಾ ಕ್ರೂರಿಗಳಾಗಿದ್ದರು.[4] ನಾಟಕ ಕಂಪನಿಯ ಹಲವು ಕಲಾವಿದರು ಮತ್ತು ಕಲಾವಿದೆಯರು ಕೇವಲ ಮಹಾನ್ ಕಲಾವಿದರಷ್ಟೇ ಅಲ್ಲ. ತಮ್ಮ ನಡೆನುಡಿಯಲ್ಲಿ ದೇಶಭಕ್ತರ ಆದರ್ಶಗಳನ್ನು ಪಾಲಿಸಿಕೊಂಡು ಬಂದವರು. ವೃತ್ತಿನಾಟಕ ಕಂಪನಿಗಳಲ್ಲಿದ್ದ ಗರುಡರು, ಏಣಗಿ ಬಾಳಪ್ಪ ಮುಂತಾದ ಹಿರಿಯರು ಖಾದಿ ವಸ್ತ್ರಧಾರಿಗಳಾಗಿ ಪರಿವರ್ತಿತರಾಗಿ ಬಾಳಿದುದ್ದನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬಹುದು. ಸ್ವಾತಂತ್ರ್ಯ ಚಳವಳಿಯ ಹೋರಾಟಗಾರರಿಗೆ ರಂಗಕಲಾವಿದೆ ರಹಿಮಾನವ್ವ ಕಲ್ಮನಿಯಂತಹ ಕಲಾವಿದೆಯರು ಕಾಳುಕಡಿ, ಹಣವನ್ನು ಒದಗಿಸುತ್ತಿದ್ದರು. ಪ್ರಭುತ್ವದ ಎದುರು ಕೆಂಗಣ್ಣಿಗೆ ಗುರಿಯಾಗಿ ಇದ್ದವರ ಹೊಣೆಗಾರಿಕೆಗಳನ್ನು ಹೊರುವುದು ಅಂದಿನ ರಂಗಕಲಾವಿದೆಯರಿಗೆ ಇದು ಸುಲಭ ಸಾಧ್ಯವಾಗಿರಲಿಲ್ಲ. ಏಣಗಿ ಬಾಳಪ್ಪನವರು ಈ ಬಗ್ಗೆ ಹೇಳುವ ಮಾತುಗಳು ಇಲ್ಲಿ ಉಲ್ಲೇಖನೀಯ. ನಾಟಕದ ಕಲಾವಿದರು, ಕಂಪನಿಗಳ ಮಾಲೀಕರು, ಭೂಗತ ಕಾರ್ಯಕರ್ತರನ್ನು ಬ್ರಿಟೀಷರಿಗೆ ಹಿಡಿದುಕೊಟ್ಟಿದ್ದರೆ ಸಾಕಷ್ಟು ಇನಾಮು ಪಡೆಯಬಹುದಿತ್ತು. ಅಂತಹ ಪ್ರೇರಣೆಗಳು, ಅವಕಾಶಗಳು ಹೇರಳವಾಗಿದ್ದವು. ಆದರೆ ಕನ್ನಡ ರಂಗಭೂಮಿ ಮತ್ತು ಕಲಾವಿದರು ಹೆಮ್ಮೆ ಪಟ್ಟುಕೊಳ್ಳುವ ಸಂಗತಿ ಎಂದರೆ ಅಂಥಹ ದೇಶದ್ರೋಹದ ಕೆಲಸವನ್ನು ಒಬ್ಬ ಕಲಾವಿದರೂ ಮಾಡದಿರುವುದು. ಸಾಧ್ಯವಿದ್ದರೆ ಭೂಗತ ಸ್ವಾತಂತ್ರ್ಯ ಹೋರಾಟಗಾರರಿಗೆ ಸಹಾಯ ಮಾಡುತ್ತಿದ್ದರು; ಇಲ್ಲವಾದರೆ ಸುಮ್ಮನಿದ್ದುಬಿಡುತ್ತಿದ್ದರು.[5] ಸ್ವಾತಂತ್ರ್ಯ ಚಳವಳಿಗೆ ಪ್ರತಿಕ್ರಿಯಿಸುವ ರಂಗಕಲಾವಿದೆಯರಿಗೆ ಅಂದಿನ ಪ್ರಭುತ್ವ ತೊಂದರೆ ನೀಡುತ್ತಿದ್ದುದಕ್ಕೆ ರಂಗಭೂಮಿ ಕಲಾವಿದರ ಕುರಿತ ಕೃತಿಗಳಲ್ಲಿ ಉಲ್ಲೇಖಗಳಿವೆ. ೧೯೩೦ರಲ್ಲಿ ಗದುಗಿನ ಖ್ಯಾತ ಕಲಾವಿದೆ ರತ್ನ ಎನ್ನುವವರನ್ನು ಹಾಕಿಕೊಂಡು ದೊಡ್ಡಮಟ್ಟದಲ್ಲಿ ಕಿತ್ತೂರು ಚೆನ್ನಮ್ಮ ನಾಟಕ ಪ್ರದರ್ಶಿಸಲು ಸಿದ್ಧತೆ ನಡೆಸಿದರು. ಆದರೆ ಇದಕ್ಕೆ ಧಾರವಾಡದ ಕಲೆಕ್ಟರ್ ಅನುಮತಿ ನೀಡದೆ ಇರುವುದರಿಂದ ದಿಲ್ಲಿಯವರೆಗೆ ಪ್ರಯತ್ನಿಸಿದರೂ ಫಲಕಾರಿಯಾಗಲಿಲ್ಲ. ಯಾಕೆಂದರೆ ಆಗಿನ್ನೂ ಬ್ರಿಟೀಷರ ಆಡಳಿತವೇ ಇದ್ದುದ್ದರಿಂದ ತಮ್ಮ ವಿರುದ್ಧ, ಹೋರಾಡಿದ ಮಹಿಳೆ ಕುರಿತು ನಾಟಕಕ್ಕೆ ಪರವಾನಗಿ ಕೊಡಲು ಹೇಗೆ ಸಾಧ್ಯ?[6]

ರಂಗಕಲಾವಿದರು ಆ ಸಮಯದಲ್ಲಿ ಆಡುತ್ತಿದ್ದ ನಾಟಕಗಳಲ್ಲಿ ಕನ್ನಡ ಪರವಾದ ಜಾಗೃತಿ ತುಂಬಿರುವ ಸಂಭಾಷಣೆಗಳಿದ್ದುದ್ದನ್ನು ಹಲವು ರಂಗಕಲಾವಿದೆಯರು ಸ್ಮರಿಸಿದ್ದಾರೆ. ರಂಗಕಲಾವಿದೆಯರು ಅಭಿನಯಿಸುತ್ತಿದ್ದ ಕಿತ್ತೂರು ಚೆನ್ನಮ್ಮ , ಸಿಂಧೂರ ಲಕ್ಷ್ಮಣ, ಸಂಗೊಳ್ಳಿ ರಾಯಣ್ಣ , ಎಚ್ಚಮ ನಾಯಕ ಮುಂತಾದ ನಾಟಕಗಳು ಕನ್ನಡ ಜಾಗೃತಿ ಮೂಡಿಸುತ್ತಿದ್ದವು. ಈ ನಾಟಕಗಳು ಐತಿಹಾಸಿಕ ಘಟನೆಗಳನ್ನು ಸ್ಮರಿಸುವುದರ ಜೊತೆಗೆ, ಬ್ರಿಟೀಷರ ವಿರುದ್ಧ

ಹೋರಾಟ ರೂಪಿಸುವಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕೆಲಸ ಮಾಡಿದವು. ಸ್ವಾತಂತ್ರ್ಯ ಹೋರಾಟ ಮಾತ್ರವಲ್ಲ, ಕನ್ನಡ ಭಾಷಾ ಬೆಳವಣಿಗೆಗೆ ಪ್ರೇಕ್ಷಕರಿಗೆ ಪ್ರೇರಣೆಯನ್ನು ಒದಗಿಸುತ್ತಿದ್ದವು. ರಂಗಕಲಾವಿದೆಯರು ನಾಟಕಗಳಲ್ಲಿ ಹಾಡುತ್ತಿದ್ದ ಕನ್ನಡದ ಪರವಾದ ಕೆಚ್ಚೆದೆಯ ಮಾತುಗಳು ಪ್ರೇಕ್ಷಕರನ್ನು ರಂಜಿಸುವುದರ ಜೊತೆಗೆ ರೋಮಾಂಚನಗೊಳಿಸುತ್ತಿದ್ದವು. ನಾಡು, ನುಡಿ, ರಕ್ಷಣೆಗೆ ಪಣ ತೊಡುವಂತೆ ಪ್ರೇರೇಪಿಸುತ್ತಿದ್ದವು. ವೃತ್ತಿರಂಗಭೂಮಿ ನಾಟಕಗಳು ಬೇರೂರಿದ ೧೯೦೦ ರಿಂದ ಸ್ವಾತಂತ್ರ್ಯ ಸಿಗುವ ೧೯೪೭ರ ವರೆಗಿನ ಎಲ್ಲಾ ಐತಿಹಾಸಿಕ, ಬಹುತೇಕ ಪೌರಾಣಿಕ, ಸಾಮಾಜಿಕ ನಾಟಕಗಳು ಕನ್ನಡದ ಜಾಗೃತಿ ಮೂಡಿಸಿದವು. ಕನ್ನಡ ಭಾಷೆ ಆಡುವ ಪ್ರಾಂತ್ಯದುದ್ದಕ್ಕೂ ಕನ್ನಡ ಪರ ಘೋಷಣೆಗಳು, ನಾಟಕದಲ್ಲಿ ಮೊಳಗಿದವು. ಆಗಿನ್ನೂ ಏಕೀಕರಣ ಆಗಿರಲಿಲ್ಲ. ಕರ್ನಾಟಕ ಎಂಬ ಕಲ್ಪನೆಯೇ ಇರಲಿಲ್ಲ, ಆದರೆ ಕನ್ನಡ ಮಾತನಾಡುವ ಎಲ್ಲೆಡೆ ಕನ್ನಡ ಜಾಗೃತಿ ಹಮ್ಮುತ್ತಿದ್ದುದು ಆಶಾದಾಯಕ ಬೆಳವಣಿಗೆ ಆಗಿತ್ತು. ಕರ್ನಾಟಕ ಏಕೀಕರಣಕ್ಕೆ ಕನ್ನಡ ನೆಲವನ್ನು ಹದಗೊಳಿಸುವ ಕೆಲಸವನ್ನು ನಾಟಕಗಳು ದೊಡ್ಡ ಪ್ರಮಾಣದಲ್ಲಿ ಮಾಡಿದವೆನ್ನಬಹುದು. ಅಂತೆಯೇ ಕನ್ನಡ ರಂಗಭೂಮಿ ಏಕೀಕರಣ ಚಳವಳಿಗೆ ಸೂಕ್ತವಾಗಿ ಸ್ಪಂದಿಸಿತು.[7] ಬೆಳಗಾವಿಯಲ್ಲಿ ರಂಗಕಲಾವಿದೆ ಚಿಂದೋಡಿ ಲೀಲಾರು ಕನ್ನಡ ಪರ ಕೆಲಸಗಳಲ್ಲಿ ತೊಡಗಿರುವಾಗ ಸಾಕಷ್ಟು ಬೆದರಿಕೆ ಪತ್ರಗಳು ಅವರಿಗೆ ಬರುತ್ತವೆ, ನಷ್ಟವನ್ನು ಅನುಭವಿಸುತ್ತಾರೆ. ಆದರೆ ಅದ್ಯಾವುದಕ್ಕೂ ಅವರು ಜಗ್ಗುವುದಿಲ್ಲ. ಹೀಗೆ ರಂಗಕಲಾವಿದೆಯರು ತಮ್ಮದೇ ಮಿತಿಗಳಲ್ಲಿ ಚಳವಳಿಗಳಿಗೆ ಸ್ಪಂದಿಸಿರುವುದನ್ನು ಗುರುತಿಸಬಹುದು. ಚಿಂದೋಡಿ ಲೀಲಾರಂತೆಯೇ ಬೆಳಗಾವಿಯಲ್ಲಿ ಕನ್ನಡ ಪರ ಹೋರಾಟ ಮಾಡಿದ ಏಣಗಿ ಬಾಳಪ್ಪನವರ ಕನ್ನಡ ಪರ ಸಂಕಲ್ಪವನ್ನು ಇಲ್ಲಿ ಪೂರಕವಾಗಿ ಗಮನಿಸಬಹುದು. ಬಾಳಪ್ಪನವರು ಕಂಪನಿಗೆ 'ಕಲಾವೈಭವದ ನಾಟ್ಯ ಸಂಘ ಬೆಳಗಾವಿ, ಕರ್ನಾಟಕ' ರಾಜ್ಯವೆಂದೇ ಬೋರ್ಡ್ ಬರೆಸಿ ಪ್ರದರ್ಶಿಸಿದರು. ಬೆಳಗಾವಿ ಕರ್ನಾಟಕದ್ದು ಎಂದೇ ಪ್ರತಿಪಾದಿಸುತ್ತಿದ್ದರು. ಖಾನಾಪುರದಲ್ಲಿ ಕ್ಯಾಂಪ್ ಮಾಡಿದಾಗ ಸಿಟ್ಟಿಗೆದ್ದ ಮರಾಠಿ ಪುಢಾರಿಗಳು, ಸಂಜೆ ಸಮಯದಲ್ಲಿ ನಾಟಕ ನೋಡಲು ಬಂದ ಪ್ರೇಕ್ಷಕರನ್ನು ಹೆದರಿಸಿ ವಾಪಸ್ಸು ಕಳುಹಿಸುತ್ತಿದ್ದರು. ಕೆಲವೇ ಮಂದಿ ಪ್ರೇಕ್ಷಕರು ಬಂದಾಗ ಬಾಳಪ್ಪನವರು ನಾಟಕ ಪ್ರದರ್ಶಿಸುತ್ತಿದ್ದರು. ಪ್ರೇಕ್ಷಕರು ಬಾರದೆ ನಷ್ಟ ಅನುಭವಿಸಿದರೂ ಬಾಳಪ್ಪನವರು ತಮ್ಮ ಕಂಪನಿಯ ಬೋರ್ಡನ್ನು ಬದಲಿಸಲಿಲ್ಲ. ಖಾನಾಪುರದಿಂದ ಬೆಳಗಾವಿಯ ಆಳ್ನಾವರಕ್ಕೆ ಕ್ಯಾಂಪ್ ಬದಲಾಯಿಸಿದರೂ ಸಹ ಅಲ್ಲಿಯೂ ತಮ್ಮ ಕಂಪನಿಯ ಬೋರ್ಡಿನಲ್ಲಿದ್ದ ಬೆಳಗಾವಿ, ಕರ್ನಾಟಕ ರಾಜ್ಯ ಎಂದು ಬರೆಸಿದ್ದ ಬೋರ್ಡನ್ನು ತೆರೆಯುವಂತೆ ಬೆದರಿಕೆ ಹಾಕಿದರು. ನೀವಿನ್ನು ನಾಮಫಲಕ ಬದಲಾಯಿಸಿಲ್ಲ, ನಿಮ್ಮ ಛಲ ಹೀಗೆಯೇ ಮುಂದುವರಿದರೆ ಪರಿಸ್ಥಿತಿ ನೆಟ್ಟಗಿರಲ್ಲ. ನಮ್ಮ ಮಾತಿಗೆ ಬೆಲೆ ಕೊಟ್ಟರೆ ಸರಿ, ಇಲ್ಲವಾದರೆ ಅಪಾಯ ಕಾದಿದೆ ಎಂದು ತಿಳಿಯಿರಿ ಎಂದು ಹೆಸರಿಲ್ಲದ ಬೇನಾಮಿ ಪತ್ರಗಳು ಬರುತ್ತಿದ್ದವು. ಇಂಥಹ ಒತ್ತಡಗಳಿಗೆ ಬಾಳಪ್ಪ ಮಣಿಯಲಿಲ್ಲ. ಬದಲಾಗಿ ನಾಟಕ ಪ್ರದರ್ಶನದ ಮಧ್ಯ ಬೇನಾಮಿ ಪತ್ರಗಳನ್ನು ಓದಿ ಹೇಳಿ ಪ್ರೇಕ್ಷಕರನ್ನು ಎಚ್ಚರಿಸುತ್ತಿದ್ದರು. ಅಷ್ಟಕ್ಕೇ ನಿಲ್ಲದೇ, ಪತ್ರ ಬರೆದವರು ತಮ್ಮ ಹೆಸರನ್ನೂ ತಿಳಿಸಿಲ್ಲ, ಹೆಸರು ತಿಳಿಸದ ಹೇಡಿಗಳಿಂದ ಕರ್ನಾಟಕ-ಕನ್ನಡ

ಸಲುವಾಗಿ ನನ್ನ ಕೊಲೆಯಾದರೆ ನನ್ನ ಜನ್ಮ ಸಾರ್ಥಕವಾಗುತ್ತದೆ. ಕನ್ನಡ ಸೇವಕನಾದ ಒಬ್ಬ ಕಲಾವಿದನಿಗೆ ಆದ ಅಪಮಾನ ಕನ್ನಡ ನಾಡಿನ ಪ್ರೇಕ್ಷಕರಾದ ನಿಮಗೆಲ್ಲರಿಗೂ ಆದಂತೆ ಎಂದು ಹೇಳಿ ನಾಟಕದ ನಡುವೆ ಪ್ರೇಕ್ಷಕರಲ್ಲಿ ಸ್ವಾಭಿಮಾನವನ್ನು ಮೂಡಿಸುತ್ತಿದ್ದರು. ಅಂದಿನ ಸಂದರ್ಭದಲ್ಲಿ ಈ ಮಾತುಗಳನ್ನು ಕೇಳಿದ ಸ್ವಾಭಿಮಾನಿ ಪ್ರೇಕ್ಷಕರು ರಂಗಕಲಾವಿದರ ಕನ್ನಡಾಭಿಮಾನಕ್ಕೆ ಕೈಜೋಡಿಸುತ್ತಿದ್ದರು. ಅಪಾಯ ಎದುರಾಗುವ ಸಂದರ್ಭವಿದ್ದುದನ್ನು ಅರಿತ ಪ್ರೇಕ್ಷಕರು ಬಾಳಪ್ಪರಂತ ಕಲಾವಿದರಿಗೆ ಭದ್ರತೆ ಒದಗಿಸಿ ಭಾಷಾಂಧರ ಕುತಂತ್ರ ನಡೆಯದಂತೆ ತಡೆಯುತ್ತಿದ್ದರು. ಬಾಳಪ್ಪನವರ ಕಲಾವೈಭವ ನಾಟಕ ಕಂಪನಿಯಂತೆಯೇ ಬೆಳಗಾವಿಯಲ್ಲಿ ಚಿಂದೋಡಿ ಲೀಲಾರ ಕೆ.ಬಿ.ಆರ್. ಡ್ರಾಮಾ ಕಂಪನಿ, ಕನ್ನಡ ಕಟ್ಟುವ ಕೆಲಸವನ್ನು ನಿರಂತರವಾಗಿ ಮಾಡಿದೆ. ಕನ್ನಡ ಚಳವಳಿಗಳಿಗೂ ನಾಟಕ ಕಂಪನಿಗಳಿಗೂ ಅರ್ಥಾತ್ ಸಂಬಂಧವಿದೆ. ಈ ಅವಶ್ಯಕತೆ ೧೯೫೦-೬೦ ದಶಕದಲ್ಲಿ ಹೆಚ್ಚಾಗಿತ್ತು. ಮರಾಠಿ ಹಾವಳಿ ಇರುವ ಉತ್ತರ ಕರ್ನಾಟಕದಲ್ಲಿ ಚಿಂದೋಡಿ ಲೀಲಾರ ಕೆ. ಬಿ.ಆರ್. ಡ್ರಾಮಾ ಕಂಪನಿ ಕನ್ನಡಿಗರ ಭಾವೈಕ್ಯಕ್ಕೆ ಶ್ರಮಿಸಿರುವುದನ್ನು ಡಾ. ರಾಮಕೃಷ್ಣ ಮರಾಠೆಯಂತಹ ರಂಗತಜ್ಞರು 'ರಂಗಭೂಮಿಯ ಕನ್ನಡ ಸಂವೇದನೆ' ಎಂಬ ಗ್ರಂಥದಲ್ಲಿ ಸ್ಮರಿಸಿದ್ದಾರೆ. ಹಾಗೆ ನೋಡಿದರೆ ಒಂದೊಂದು ನಾಟಕ ಕಂಪನಿಯೂ ಒಂದೊಂದು ಕನ್ನಡ ಪರವಾದ ಸಂಘಟನೆಯಾಗಿ ನಾಡು, ನುಡಿ, ಗಡಿ ಕುರಿತಂತೆ ಸ್ವಾಭಿಮಾನದ ನಿಲುವು ತಾಳುವಂತೆ ಪ್ರೇಕ್ಷಕರನ್ನು ಪ್ರೇರೇಪಿಸಿದೆ. ಇದರಲ್ಲಿ ಕನ್ನಡ ರಂಗಭೂಮಿ ಕಲಾವಿದೆಯರ ಪಾಲು ಹೆಚ್ಚಾಗಿತ್ತು ಎಂಬುದನ್ನು ಮರೆಯುವಂತಿಲ್ಲ. ೧೯೮೦ರಿಂದ ೧೯೯೦ರ ದಶಕದ ಅವಧಿಯಲ್ಲಿ ಚಿಂದೋಡಿ ಲೀಲಾರ ಕೆ.ಬಿ.ಆರ್. ಡ್ರಾಮಾ ಕಂಪನಿ ಬೆಳಗಾವಿಯಲ್ಲಿ ಮರಾಠಿಗಳ ಕಿರುಕುಳವನ್ನು ಸತತವಾಗಿ ಎದುರಿಸುತ್ತಲೇ ಹತ್ತು ವರ್ಷಗಳಷ್ಟು ದೀರ್ಘಕಾಲ ಗಟ್ಟಿಯಾಗಿ ನೆಲೆಯೂರಿ ಕ್ಯಾಂಪ್ ನಡೆಸಿತು. ಬೆಳಗಾವಿಯ ನಗರಪಾಲಿಕೆಯ ಅಧಿಕಾರ ಮಹಾರಾಷ್ಟ್ರ ಏಕೀಕರಣ ಸಮಿತಿಯ ಹಿಡಿತದಲ್ಲಿದ್ದಾಗ ರಂಗಕಲಾವಿದೆ ಚಿಂದೋಡಿ ಲೀಲಾ ದೊಡ್ಡ ಹೋರಾಟ ಮಾಡಿ ಮಹಾನಗರ ಪಾಲಿಕೆಯ ಜಾಗವನ್ನು ಒಪ್ಪಂದದ ಮೇಲೆ ಪಡೆದು ಅಲ್ಲಿ ರಂಗಮಂದಿರವನ್ನು ಸ್ಥಾಪಿಸಿ ನಿರಂತರವಾಗಿ ಕನ್ನಡ ನಾಟಕಗಳು ಪ್ರದರ್ಶನ ಮಾಡುವಲ್ಲಿ ಯಶಸ್ವಿಯಾದರು. ಆಗ ಅವರಿಗೆ ಬೆಳಗಾವಿಯಲ್ಲಿ ಕನ್ನಡಪರ ಸಂಘಟನೆಗಳು, ಬಸವರಾಜ ಕಟ್ಟೀಮನಿಯಂತಹ ಹಿರಿಯ ಸಾಹಿತಿಗಳು ಬೆಂಬಲ ನೀಡಿದುದನ್ನು ಸ್ಮರಿಸುತ್ತಾರೆ. ಇದೇ ಸಂದರ್ಭದಲ್ಲಿ ನಡೆದ ಬೆಳಗಾವಿಯ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಕನ್ನಡಿಗರ ಅಧಿಕೃತ ಅಭ್ಯರ್ಥಿಯಾಗಿ ಚಿಂದೋಡಿ ಲೀಲಾ ಸ್ಪರ್ಧಿಸಿ ಮಹಾನಗರ ಪಾಲಿಕೆಯ ಸದಸ್ಯರಾಗಿ ಆಯ್ಕೆಯಾದರು. ಚಿಂದೋಡಿ ಲೀಲಾ ತಮ್ಮ ನಾಟಕದ ಕಂಪನಿ ಕ್ಯಾಂಪನ್ನು ಬೆಳಗಾವಿಯಿಂದ ಬೇರೆ ಕಡೆಗೆ ಸ್ಥಳಾಂತರಿಸಿದಾಗ ಬೆಳಗಾವಿಯಂಥಹ ಗಡಿನಾಡಿನಲ್ಲಿ ಒಂದು ಶಾಶ್ವತವಾದ ರಂಗಮಂದಿರವನ್ನು ಕಟ್ಟುವ ಆಸೆಯನ್ನು ಹೊಂದಿದ್ದರು. ಗಡಿನಾಡ ಭಾಗಗಳಲ್ಲಿ ರಂಗಕಲಾವಿದೆಯರ ಕಲಾ ಸೇವೆ ಕಂಡು ಮೆಚ್ಚಿಕೊಂಡ ಪ್ರೇಕ್ಷಕರಿದ್ದಾರೆ. ರಂಗಕಲಾವಿದೆ ಮಾಲತಿ ಮೈಸೂರು ತಮ್ಮ ಆತ್ಮಕಥೆ 'ತೆರೆ ಸರಿಯಿತು' ಕೃತಿಯಲ್ಲಿ ಬೆಳಗಾವಿ ಜಿಲ್ಲೆಯ ಗಡಿ ಭಾಗದಲ್ಲಿ ಬೆಡಿಕೆಹಾಳದಿಂದ ಪ್ರೇಕ್ಷಕ ಅಭಿಮಾನಿಯೊಬ್ಬ ಪತ್ರ ಬರೆದು ಕ್ಯಾಂಪ್ ಹಾಕಬೇಕೆಂದು ವಿನಂತಿಸಿದುದನ್ನು

ಪ್ರಸ್ತಾಪಿಸುತ್ತಾರೆ. ಕನ್ನಡದ ಕಲಾವಿದೆ ಶ್ರೀಮತಿ ಮಾಲತಿಶ್ರೀ ಮೈಸೂರು ಅವರಿಗೆ ಗಡಿನಾಡ ಭೂಮಿಯಲ್ಲಿ ಎಷ್ಟೋ ಜನ ಕಲಾಪ್ರೇಮಿಗಳಿದ್ದಾರೆ. ಆದ್ದರಿಂದ ತಾವು ವರ್ಷಕ್ಕೊಮ್ಮೆಯಾದರೂ ತಮ್ಮ ಕಂಪನಿ ಕ್ಯಾಂಪ್ ಹಾಕಿ ಕನ್ನಡ ಕಲೆಯ ರಸದೂಟವನ್ನು ಉಣಿಸಿ, ಪ್ರತಿಯೊಬ್ಬ ಕಲಾಭಿಮಾನಿಯ ಮನಸ್ಸು ತಣಿಯಿವಂತೆ ಮಾಡಬೇಕು.[9] ಕಲಾವಿದೆ ಮಾಲತಿ ಮೈಸೂರು ಬಿಡುವಿಲ್ಲದ ನಟಿಯಾಗಿದ್ದರೂ ಸಹ ಕನ್ನಡಪರ ಚಳವಳಿಗಳಿಂದ ದೂರ ಉಳಿದವರಲ್ಲ. ಒಮ್ಮೆ ಶೂಟಿಂಗ್ ಮಧ್ಯೆ ಬಿಡುವು ದೊರೆತ ಕಾರಣ ಗೋಕಾಕ್, ಗುಲ್ಬರ್ಗಕ್ಕೆ ಪ್ರವಾಸ ಹೋಗಿದ್ದರು. ಆದರೆ ಈ ನಡುವೆ ಕಲಾವಿದರ ಸಂಘದಿಂದ ಗೋಕಾಕ್ ಚಳವಳಿಗೆ ಭಾಗವಹಿಸಲು ಕರೆ ಬಂದಾಗ ಪ್ರವಾಸವನ್ನು ಮೊಟಕು ಮಾಡಿ ಬೆಂಗಳೂರಿನಲ್ಲಿ ಕಲಾವಿದರೊಂದಿಗೆ ಗೋಕಾಕ್ ಚಳವಳಿಯಲ್ಲಿ ಭಾವಹಿಸಿದುದನ್ನು ತಮ್ಮ ಆತ್ಮಕಥೆಯಲ್ಲಿ ಪ್ರಸ್ತಾಪಿಸಿದ್ದಾರೆ. ಪ್ರವಾಸಕ್ಕೆಂದು, ಗೋಕಾಕಕ್ಕೆ ಹೊರಟೆ. ಅಲ್ಲಿ ಹೋಗಿ ತಲುಪುವ ಹೊತ್ತಿಗೆ ಟಿ.ವಿ. ಕಲಾವಿದರ ಸಂಘದಿಂದ ಚಳವಳಿ ಹಮ್ಮಿಕೊಂಡಿದ್ದೇವೆ. ಎಲ್ಲ ಕಲಾವಿದರು ನಾಳೆ ನಡೆಯಲಿರುವ ಈ ಹೋರಾಟದಲ್ಲಿ ಭಾಗವಹಿಸಬೇಕು ಎಂದು ಬಿ. ಸುರೇಶ್ ಗೋಕಾಕಕ್ಕೆ ಕರೆ ಮಾಡಿದರು. ಸರಿ ಅಲ್ಲಿಂದ ತಕ್ಷಣ ವಾಪಸ್ ಹೊರಟು ಬೆಂಗಳೂರು ತಲುಪಿ ಚಳವಳಿಯಲ್ಲಿ ಭಾಗವಹಿಸಿದೆ. ಅದರಲ್ಲಿ ಡಾ. ರಾಜಕುಮಾರ್ ಸಹ ಭಾಗವಹಿಸಿದ್ದರು.[10] ಹೀಗೆ ಆಯಾ ಕಾಲ ಸಂದರ್ಭಕ್ಕನುಸಾರವಾಗಿ ಕೆಲವು ರಂಗಕಲಾವಿದೆಯರು ಕನ್ನಡ ಪರವಾದ ಮತ್ತು ಸ್ವಾತಂತ್ರ್ಯ ಚಳವಳಿಗಳಿಗೆ ಪ್ರಜ್ಞಾಪೂರ್ವಕವಾಗಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಕ್ವಿಟ್ ಇಂಡಿಯಾ ಚಳವಳಿ ನಡೆಯುತ್ತಿರುವಾಗ ಕಂಪನಿ ಕಲಾವಿದೆಯರು ಉಂಟಾದ ಕಷ್ಟನಷ್ಟಗಳನ್ನು ಸಹಿಸಿಕೊಂಡಿದ್ದಾರೆ. ಚಿತ್ರದುರ್ಗ ಕ್ಯಾಂಪ್ ಸಮಯದಲ್ಲೇ ಕ್ವಿಟ್ ಇಂಡಿಯಾ (ಬಿಳಿಯರೇ ಭಾರತದಿಂದ ತೊಲಗಿ) ಚಳವಳಿ ಉಗ್ರ ಸ್ವರೂಪವನ್ನು ತಾಳಿದ್ದರಿಂದ ಚಳವಳಿಯ ಪ್ರಭಾವಕ್ಕೆ ಬಿದ್ದ ಕಂಪನಿಯು ಅನೇಕ ಕಷ್ಟ ನಷ್ಟಗಳನ್ನು ಎದುರಿಸಬೇಕಾಯಿತು. ಚಳವಳಿಯ ಹೆಸರಿನಲ್ಲಿ ಹಿಂಸಾಕೃತ್ಯಗಳೂ ನಡೆಯತೊಡಗಿದವು. ಇಂತಹ ವಾತಾವರಣದಲ್ಲಿ ನಾವು ನಾಟಕಗಳನ್ನು ಆಡಲು ಹೇಗೆ ಸಾಧ್ಯ? ಆಡಿದರೂ ನೋಡುವವರು ಯಾರು?[11] ಎನ್ನುತ್ತಾರೆ ರಂಗಕಲಾವಿದೆ ಮಳವಳ್ಳಿ ಸುಂದರಮ್ಮ.

ಮಳವಳ್ಳಿ ಸುಂದರಮ್ಮನವರು ಕಾನಕಾನಹಳ್ಳಿಯಲ್ಲಿ ಕ್ಯಾಂಪ್ ಮಾಡುತ್ತಿರುವಾಗ ಮಹಾತ್ಮಗಾಂಧೀಜಿಯವರು ಹಂತಕನೊಬ್ಬನ ಗುಂಡೇಟಿಗೆ ಬಲಿಯಾಗಿ ಅಸ್ತಂಗತರಾದಾಗ ಇಡೀ ದೇಶವೇ ಶೋಕಸಾಗರದಲ್ಲಿ ಮುಳುಗಿರುವಾಗ ತಾವು ನಾಟಕ ನಿಲ್ಲಿಸಿ ಅವರ ಶ್ರದ್ಧಾಂಜಲಿ ನಡೆಸುದುದನ್ನು ಪ್ರಸ್ತಾಪಿಸುತ್ತಾರೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಸಮಯದಲ್ಲಿ ಸಂತೋಷದಿಂದ ತಾವಾಡುತ್ತಿದ್ದ ನಾಟಕದ ಪಾತ್ರಧಾರಿಗಳು ಕುಳಿತುಕೊಳ್ಳುತ್ತಿದ್ದ ರಥವನ್ನು ಶೃಂಗರಿಸಿ, ರಾಷ್ಟ್ರೀಯ ನಾಯಕರ ಭಾವಚಿತ್ರಗಳನ್ನು ತಾಯಿ ಚಾಮುಂಡೇಶ್ವರಿಯ ಜೊತೆ ಇಟ್ಟು ಮೆರವಣಿಗೆ ಮಾಡಿ ಆ ಸಂಭ್ರಮದಲ್ಲಿ ಮಳವಳ್ಳಿ ಸುಂದರಮ್ಮನವರು ಪಾಲ್ಗೊಂಡಿದ್ದಾರೆ. ಸ್ವಾತಂತ್ರ್ಯ ಚಳವಳಿಯ ಏರುಗತಿಯ ಕಾಲದಲ್ಲಿ ವೃತ್ತಿ ರಂಗಭೂಮಿ ತೀವ್ರವಾಗಿ ಚಳವಳಿಗೆ ಸ್ಪಂದಿಸಿತು. ಆಗ, ಬಹುತೇಕ ನಾಟಕ ಕಂಪನಿ ಮಾಲೀಕರು ಗಾಂಧಿ ಚಳವಳಿಗೆ ಪೂರವಾಗಿದ್ದರು. ಈ ಕಂಪನಿಗಳು ತಮ್ಮ ಕಲೆಕ್ಷನ್ನಿನ ಒಂದು ಚಿಕ್ಕ ಭಾಗವನ್ನು ಚಳವಳಿಗಾರರಿಗೆ ಕೊಡುತ್ತಿದ್ದವು. ವೇಷ ಮರೆಸಿಕೊಂಡಿದ್ದ ಭೂಗತ ಚಳವಳಿಗಾರರನ್ನು

ಕಂಪನಿಯಲ್ಲಿ ಆಶ್ರಯಕೊಟ್ಟು ಪೋಲೀಸರಿಂದ ರಕ್ಷಿಸುತ್ತಿದ್ದವು[12] ಎಂಬ ರಹಮತ್ ತರೀಕೆರೆಯವರ ಮಾತನ್ನು ಈ ಹಿನ್ನಲೆಯಲ್ಲಿ ಗಮನಿಸಬೇಕು. ಅನೇಕ ಪೌರಾಣಿಕ ನಾಟಕಗಳಲ್ಲಿ ನಾಟಕದ ವಸ್ತುವಿಗೆ ಸಂಬಂಧವಿಲ್ಲದಿದ್ದರೂ ನಾಂದಿಪದ್ಯದಲ್ಲಿ, ಮಂಗಳ ಪದ್ಯಗಳಲ್ಲಿ ಭರತಮಾತೆಯನ್ನು, ಸ್ವಾತಂತ್ರ್ಯ ಚಳವಳಿಯನ್ನು ಸ್ತುತಿಸುವ ಪದ್ಯಗಳನ್ನು ರಂಗಕಲಾವಿದರು ಹಾಡುತ್ತಿದ್ದರು. ವೃತ್ತಿ ರಂಗಭೂಮಿಯ ನಾಟಕಗಳು ಪ್ರೇಕ್ಷಕರ ಮೇಲೆ ಪ್ರಭಾವ ಬೀರಿ ಜನರ ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದಂತೆ ಜನರ ವರ್ತನೆಯಲ್ಲಾದ ಬದಲಾವಣೆಗಳನ್ನು ಗಮನಿಸಿದ ಬ್ರಿಟೀಷ್ ಸರ್ಕಾರ ಮೊದಲು ಐತಿಹಾಸಿಕ ನಾಟಕಗಳ ಮೇಲೆ ನಿರ್ಬಂಧ ವಿಧಿಸಿತು. ನಂತರ ನಾಟಕ ಪ್ರದರ್ಶನಕ್ಕೆ ಪೂರ್ವದಲ್ಲಿ ನಾಟಕದ ಹಸ್ತಪ್ರತಿಯನ್ನು ನೀಡಿ ಅಧಿಕಾರಿಗಳಿಂದ ಲೈಸನ್ಸ್ ಪಡೆಯುವ ಕ್ರಮ ಆರಂಭವಾಯಿತು. ಆದರೆ ಪ್ರಭುತ್ವದ ಇಂತಹ ನಿಷೇಧಗಳನ್ನು ಮೀರುವ ಗುಪ್ತಹಾದಿಗಳನ್ನು ರಂಗಭೂಮಿ ಕಂಡುಕೊಳ್ಳುತ್ತಿತ್ತು. ಈ ಹಿನ್ನಲೆಯಲ್ಲಿ ಭಾರತದ ಬ್ರಿಟಿಶ್ ವಿರೋಧಿ ಚಳವಳಿಯನ್ನು ಪುನರ್ ವ್ಯಾಖ್ಯಾನಿಸುವ ಅಗತ್ಯವಿದೆ. ಅದು ಮುಖ್ಯವಾಗಿ ಗಾಂಧಿ ಮತ್ತು ಕಾಂಗ್ರೆಸ್ ಚಳುವಳಿಯಾಗಿ ಬಿಂಬಿತವಾಗಿದೆ. ಇದರೊಳಗೆ ಲೇಖಕರು, ಉದ್ಯಮಿಗಳು, ಕ್ರಾಂತಿಕಾರರು, ರೈತರು, ಕಲಾವಿದರು ಸಮ ಪ್ರಮಾಣದಲ್ಲಿ ತೊಡಗಿಕೊಂಡಿದ್ದರು. ಕಲಾವಿದರ ಪಾತ್ರವು ಬಹುಶಃ ಮುಖ್ಯವಾಗಿತ್ತು. ಕಾರಣ, ಸಿನಿಮಾ ಮತ್ತು ನಾಟಕ ಜನರನ್ನು ನೇರವಾಗಿ ತಲುಪುವ ಪ್ರಭಾವಶಾಲಿ ಮಾಧ್ಯಮಗಳಲ್ಲಿ ಅವರು ರಾಜಕೀಯ ಸಂದೇಶಗಳನ್ನು ಸಮರ್ಥವಾಗಿ ತಲುಪಿಸಬಲ್ಲವರಾಗಿದ್ದರು. ಈ ವಿಶಿಷ್ಟ ರಾಜಕೀಯ ಹೋರಾಟದಲ್ಲಿ 'ಸ್ವತಂತ್ರ ಮಹಿಳೆಯರು' ಎನ್ನಲಾಗುತ್ತಿದ್ದ ಆ ಕಾಲದ ಕಲಾವಿದೆಯರೂ ಭಾಗವಹಿಸಿದರು.[13] ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ರಂಗಕಲಾವಿದೆಯರು ಸಕ್ರಿಯವಾಗಿ ತೊಡಗಿಕೊಂಡಿದ್ದರಿಂದಲೇ ರಹಮತ್ ತರೀಕೆರೆಯಂತಹ ವಿದ್ವಾಂಸರು ಈ ರೀತಿ ಭಾವಿಸಿದ್ದಾರೆ. ಏಕೆಂದರೆ ರಂಗಕಲಾವಿದರು ಪ್ರಜಾಪ್ರಭುತ್ವದ ಜೀವಂತಿಕೆಯಾದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ತಾವಾಡುವ ನಾಟಕಗಳಲ್ಲಿ ಸಮರ್ಪಕವಾಗಿ ಬಳಸಿಕೊಂಡು ಪ್ರಭುತ್ವವನ್ನು ಸದಾ ಜಾಗೃತ ಸ್ಥಿತಿಯಲ್ಲಿಡುತ್ತಿದ್ದರು. ಸದಾ ಸಮಾಜಮುಖಿಯಾಗಿದ್ದ ರಂಗಕಲಾವಿದೆಯರು, ಕಂಪನಿಗಳೂ ಕೂಡ ಇಂಥಹ ಚಳವಳಿಗಳಿಗೆ ಮುಖಾ-ಮುಖಿಯಾಗುತ್ತಾ ತಮ್ಮ ಕೈಲಾದ ಸೇವೆಯನ್ನು ಮಾಡಿದ್ದಾರೆ. ಯಾಕೆಂದರೆ ಅಂದಿನ ವೃತ್ತಿ ರಂಗಭೂಮಿ ಜೀವಂತವಾಗಿತ್ತು. ನಾಟಕಕಾರ, ನಟ-ನಟಿಯರು ಪ್ರಜಾಪ್ರಭುತ್ವದಲ್ಲಿ ಅತ್ಯಂತ ಪ್ರಮುಖರಾಗಿದ್ದರು. ಆ ಕಾಲಕ್ಕೆ ಪ್ರಭುತ್ವದ ಅವ್ಯವಹಾರವನ್ನು ಅಥವಾ ಭ್ರಷ್ಟತೆಯನ್ನು ಜನರಿಗೆ ಮುಟಿಸುತ್ತಿದ್ದ ಸಮರ್ಥ ಮಾಧ್ಯಮವೆಂದರೆ ಅದು ರಂಗಭೂಮಿಯಾಗಿತ್ತು. ಸ್ವಾತಂತ್ರ್ಯ ಚಳವಳಿಗೆ ಮತ್ತು ಕನ್ನಡ ನಾಡು ನುಡಿ ನೆಲದ ವಿಷಯಕ್ಕೆ ರಂಗಕಲಾವಿದರು ತೀವ್ರವಾಗಿ ಸ್ಪಂದಿಸಿದ್ದಾರೆ. ರಂಗಕಲಾವಿದೆ ಗಿರಿಜಾ ಲೋಕೇಶರು ತಾವು ಗೋಕಾಕ್ ಚಳವಳಿಯಲ್ಲಿ ಭಾಗವಹಿಸಿದುದನ್ನು ತಮ್ಮ ಆತ್ಮಕಥೆಯಲ್ಲಿ ಪ್ರಸ್ತಾಪಿಸಿದ್ದಾರೆ. ಗೋಕಾಕ್ ಚಳವಳಿಯನ್ನು ತೀವ್ರ ಸ್ವರೂಪಕ್ಕೆ ಕೊಂಡೊಯ್ಯಲು ಚಿದಾನಂದ ಮೂರ್ತಿ, ಪಾಟೀಲ ಪುಟ್ಟಪ್ಪ ನಂತಹ ಸಾಹಿತಿಗಳು ಪ್ರಯತ್ನಿಸಿದರು. ಈ ಹಂತದಲ್ಲಿ ಗೋಕಾಕ್ ಚಳವಳಿಗೆ ಒಂದು ಸೆಲೆಬ್ರಿಟಿ ಫೇಸ್ ಬೇಕಿದ್ದನ್ನು ಅರಿತುಕೊಂಡ ಕಲಾವಿದರು ಕರ್ನಾಟಕ ಯಾತ್ರೆ ಹೊರಟಾಗ, ಕರ್ನಾಟಕದ ಗಡಿಭಾಗಗಳಲ್ಲಿ ಯಾತ್ರೆ. ರಾಜ್‌ಕುಮಾರ್,

ಪಾರ್ವತಮ್ಮ , ನಾನು, ಲೋಕೇಶ್, ಅಶೋಕ್, ಮಾನು ಮತ್ತು ಪುನೀತ್ ರಾಜ್‌ಕುಮಾರ್ ಎಲ್ಲರೂ ಇದ್ದೆವು[14] ಎಂಬುದನ್ನು ಗಿರಿಜಾ ಲೋಕೇಶ್ ದಾಖಲಿಸುತ್ತಾರೆ. ಗೋಕಾಕ್ ಚಳವಳಿಯ ಸಂದರ್ಭದಲ್ಲಿ, ಬೆಂಗಳೂರಲ್ಲಿ ಒಮ್ಮೆ ನಾವು ಧರಣಿ ಮಾಡಿದ್ದೆವು. ಪ್ರತಿಭಟನೆ ಜೋರಾಗಿತ್ತು. ತೀವ್ರ ಸ್ವರೂಪ ಪಡೆದಿತ್ತು. ಆಗ ಪೋಲೀಸರು ಬಂದು ನಮ್ಮನ್ನೆಲ್ಲಾ ಕರೆದುಕೊಂಡು ಹೋದರು. ಕೋರಮಂಗಲದ ಬಳಿ ಬಯಲು ಬಂದೀಖಾನೆ ಇದೆ. ಅಲ್ಲಿ ಕರೆದುಕೊಂಡು ಹೋಗಿಬಿಟ್ಟರು ಬೆಳಗ್ಗೆಯಿಂದ ಸಂಜೆವರೆಗೆ ಅಲ್ಲೇ ಇದ್ದೆವು[15] ಎಂಬ ಮಾತುಗಳನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಬ್ರಿಟೀಷರ ಆಡಳಿತಕ್ಕೆ ವೃತ್ತಿ ರಂಗಭೂಮಿಯು ಪ್ರಬಲವಾಗಿ ಪ್ರತಿಕ್ರಿಯಿಸಿದೆ. ಮರಾಠಿಯ ಕೀಚಕ, ಬಂಗಾಲಿಯ ನೀಲದರ್ಪಣ, ಕನ್ನಡದ ಲಂಕಾದಹನ, ಕಿತ್ತೂರ ಚೆನ್ನಮ್ಮ ಮುಂತಾದ ವೃತ್ತಿ ರಂಗಭೂಮಿಯ ನಾಟಕಗಳು ಬ್ರಿಟೀಷರ ಆಡಳಿತವನ್ನು ಕಟುವಾಗಿ ಟೀಕಿಸಿ ಅವರ ಅವಕೃಪೆಗೂ ಒಳಗಾಗಿದ್ದವು. ರಾಷ್ಟ್ರೀಯ ಚಳವಳಿಯ ಕಾಲಘಟ್ಟದಲ್ಲಿ ರಂಗಭೂಮಿಯ ಕೊಡುಗೆ ಏನು? ಎಂದು ಪ್ರಶ್ನೆ ಕೇಳಿದರೆ ಅದಕ್ಕೆ ವೃತ್ತಿ ರಂಗಭೂಮಿಯೊಂದೆ ತನ್ನ ನಾಟಕಗಳ ಮುಖಾಂತರ ರಾಷ್ಟ್ರೀಯ ಚಳವಳಿಯ ಬಿಸಿಯನ್ನು ಕರ್ನಾಟಕದಾದ್ಯಂತ ಮುಟ್ಟಿಸಿದೆ ಎಂದು ಉತ್ತರ ಹೇಳಬಹುದು.[16] ರಂಗಭೂಮಿಯಲ್ಲಿ ಪ್ರದರ್ಶನಗೊಳ್ಳುತ್ತಿದ್ದ ನಾಟಕಗಳಿಂದ ಪ್ರೇಕ್ಷಕರು ಸ್ವಲ್ಪ ಮಟ್ಟಿಗಾದರೂ ಭಾರತ ಸ್ವಾತಂತ್ರ್ಯ ಚಳವಳಿಯ ಏಕೀಕರಣ ಚಳವಳಿಯ ಪ್ರೇರಣೆಯನ್ನು ಪಡೆದಿದ್ದರೆಂಬುದು ಸತ್ಯ. ವೃತ್ತಿನಾಟಕ ಕಂಪನಿಗಳನ್ನು ಎರಡನೆಯ ಸ್ತರದ ಜನಪದ ರಂಗಭೂಮಿ ಎನ್ನಬಹುದು. ಮೊದಮೊದಲು ಆ ಪಾತ್ರಗಳನ್ನು ಬ್ರಿಟೀಷರ ಹೋಲಿಕೆಯಿಟ್ಟು , ಅವರ ಮಾತುಗಳ ಥರವೇ ಹಾಡುಗಳನ್ನು ಬರೆಯುತ್ತಿದ್ದರು. ಆ ತರದ ಪ್ರತಿರೋಧದ ಛಾಯೆಯುಳ್ಳ ಲಾವಣಿಗಳು ಬಹು ಬೇಗ ಪ್ರಸಿದ್ಧವಾದವು.

ಇದು ಕ್ವಿಟ್ ಇಂಡಿಯಾ ಚಳವಳಿಯ ಸಮಯದಲ್ಲಿ ಕಂಪನಿಗಳೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಲು ಮಾಡಿಕೊಂಡಂಥ ಒಂದು ಉಪಾಯ. ಆದರೆ ಇದೆಲ್ಲ ಬ್ರಿಟೀಷ್ ಸರ್ಕಾರದ ಕಿವಿಗೆ ಬಿತ್ತು. ಅವರು ಗೂಢಾಚಾರರನ್ನು, ತಮ್ಮ ಪ್ರತಿನಿಧಿಗಳನ್ನು ನಾಟಕಗಳಿಗೆ ಕಳುಹಿಸಿ ಲಾವಣಿಯನ್ನು ಭಾಷಾಂತರಿಸಿ ಅದನ್ನು ತಮ್ಮ ಮೇಲಾಧಿಕಾರಿಗಳ ಕಿವಿಗೆ ಮುಟ್ಟಿಸುತ್ತಿದ್ದರು. ಆಳುವ ಬ್ರಿಟೀಷ್ ದೊರೆಗಳ ಬಗ್ಗೆ ವ್ಯಂಗ್ಯವಿದ್ದಲ್ಲಿ ಮುಂದೆ ನಾಟಕ ಕಂಪನಿಗೆ ಬಹಳ ಕಿರುಕುಳ ನೀಡಲಾಗುತ್ತಿತ್ತು.[17] ದೇಶದುದ್ದಕ್ಕೂ ಸ್ವಾತಂತ್ರ್ಯ ಸಮರ ಆರಂಭವಾದಾಗ ರಂಗಕಲಾವಿದೆಯರು ತಾವು ಪ್ರದರ್ಶಿಸುವ ನಾಟಕಗಳ ಮೂಲಕ ಪರೋಕ್ಷವಾಗಿ ದೇಶದ ಬಗೆಗಿನ ಸ್ವಾಭಿಮಾನ, ನಾಡು-ನುಡಿಯ ಬಗ್ಗೆ ಆತ್ಮಾಭಿಮಾನವನ್ನು, ಸ್ವಾತಂತ್ರ್ಯ ಪ್ರೇಮವನ್ನು, ಗುಡಿಕೈಗಾರಿಕೆಗಳ ಮಹತ್ವವನ್ನು ಸಾರಿ ಚಳವಳಿಗಳಿಗೆ ಪ್ರೇಕ್ಷಕರನ್ನು ಪ್ರೇರೇಪಿಸಲು ಪರೋಕ್ಷವಾಗಿ ಕಾರಣಕರ್ತರಾಗಿದ್ದಾರೆ. ಕರ್ನಾಟಕ ಏಕೀಕರಣ ಚಳವಳಿಯ ಸಮಯದಲ್ಲಿ ಪ್ರೇಕ್ಷಕರಲ್ಲಿ ಮತ್ತು ಸಾರ್ವಜನಿಕರಲ್ಲಿ ಕನ್ನಡತನವನ್ನು ಹುಟ್ಟು ಹಾಕಿ, ಕನ್ನಡಾಭಿಮಾನವನ್ನು ಮೊಳಗಿಸಲು ರಂಗಕಲಾವಿದೆಯರು ಶ್ರಮಿಸಿದ್ದಾರೆ. ಐತಿಹಾಸಿಕ ವಸ್ತುವನ್ನಾಧರಿಸಿದ ನಾಟಕಗಳನ್ನಾಡುವಾಗ ಜನರಲ್ಲಿ ರಾಷ್ಟ್ರಭಕ್ತಿ, ಧರ್ಮ, ಸಂಸ್ಕೃತಿ, ಪರಂಪರೆಯ ಮೇಲೆ ಅಭಿಮಾನ ಮೂಡುವಂತೆ ಮಾಡಿದ್ದಾರೆ. ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಚಳವಳಿಯ ಅಗತ್ಯವನ್ನು ತಾವು ಅಭಿನಯಿಸುವ

ನಾಟಗಳಲ್ಲಿ ಸಾಂಕೇತಿಕವಾಗಿ ಪ್ರಸ್ತಾಪಿಸಿ ಅಭಿನಯಿಸಿರುತ್ತಾರೆ.

## ಕೊನೆ ಟಿಪ್ಪಣಿಗಳು:

1. ಗುಡಿಹಳ್ಳಿ ನಾಗರಾಜ. (2019). ಜನಪರ ರಂಗಭೂಮಿ. ಗೀತಾಂಜಲಿ ಪುಸ್ತಕ ಪ್ರಕಾಶನ. ಶಿವಮೊಗ್ಗ. ಪು.ಸಂ. 37
2. ಗುಡಿಹಳ್ಳಿ ನಾಗರಾಜ. (2019). ಜನಪರ ರಂಗಭೂಮಿ. ಗೀತಾಂಜಲಿ ಪುಸ್ತಕ ಪ್ರಕಾಶನ. ಶಿವಮೊಗ್ಗ. ಪು.ಸಂ. 24
3. ಗುಡಿಹಳ್ಳಿ ನಾಗರಾಜ. (2019). ಜನಪರ ರಂಗಭೂಮಿ. ಗೀತಾಂಜಲಿ ಪುಸ್ತಕ ಪ್ರಕಾಶನ. ಶಿವಮೊಗ್ಗ. ಪು.ಸಂ. 26
4. ಗಣೇಶ ಅಮೀನಗಡ (ಸಂ). (2019). ರಹಿಮಾನವ್ವ ಕಲ್ಮನಿ. ಕವಿತಾ ಪ್ರಕಾಶನ. ಮೈಸೂರು. ಪು.ಸಂ. 17
5. ಗುಡಿಹಳ್ಳಿ ನಾಗರಾಜ. (2019). ಜನಪರ ರಂಗಭೂಮಿ. ಗೀತಾಂಜಲಿ ಪುಸ್ತಕ ಪ್ರಕಾಶನ. ಶಿವಮೊಗ್ಗ. ಪು.ಸಂ. 37
6. ಗಣೇಶ ಅಮೀನಗಡ (ಸಂ). (2019). ರಹಿಮಾನವ್ವ ಕಲ್ಮನಿ. ಕವಿತಾ ಪ್ರಕಾಶನ. ಮೈಸೂರು. ಪು.ಸಂ. 5
7. ಗುಡಿಹಳ್ಳಿ ನಾಗರಾಜ. (2019). ಜನಪರ ರಂಗಭೂಮಿ. ಗೀತಾಂಜಲಿ ಪುಸ್ತಕ ಪ್ರಕಾಶನ. ಶಿವಮೊಗ್ಗ. ಪು.ಸಂ. 48
8. ಗುಡಿಹಳ್ಳಿ ನಾಗರಾಜ. (2019). ಜನಪರ ರಂಗಭೂಮಿ. ಗೀತಾಂಜಲಿ ಪುಸ್ತಕ ಪ್ರಕಾಶನ. ಶಿವಮೊಗ್ಗ. ಪು.ಸಂ. 53
9. ಗುಡಿಹಳ್ಳಿ ನಾಗರಾಜ. (2013). ತೆರೆ ಸರಿಯಿತು. ಕೆ.ಬಿ.ಪ್ರಗತಿ, ಬರಹ ಪಬ್ಲಿಷಿಂಗ್ ಹೌಸ್. ಬೆಂಗಳೂರು. ಪು.ಸಂ. 52
10. ಗುಡಿಹಳ್ಳಿ ನಾಗರಾಜ. (2013). ತೆರೆ ಸರಿಯಿತು. ಕೆ.ಬಿ.ಪ್ರಗತಿ, ಬರಹ ಪಬ್ಲಿಷಿಂಗ್ ಹೌಸ್. ಬೆಂಗಳೂರು. ಪು.ಸಂ. 96
11. ಸೀತಾರಾಮಯ್ಯ ಹ. ವೆಂ. (ನಿರೂಪಣೆ). ಗುಡಿಹಳ್ಳಿ ನಾಗರಾಜ (ಪರಿಷ್ಕರಣೆ). ಅಭಿನಯ ವಿಶಾರದೆ. ಕರ್ನಾಟಕ ನಾಟಕ ಅಕಾಡೆಮಿ. ಬೆಂಗಳೂರು. ಪು.ಸಂ. 31
12. ರಹಮತ್ ತರೀಕೆರೆ. (2012). ಅಮೀರಬಾಯಿ ಕರ್ನಾಟಕಿ. ಅಭಿನವ ಪ್ರಕಾಶನ. ಬೆಂಗಳೂರು. ಪು.ಸಂ. 150
13. ರಹಮತ್ ತರೀಕೆರೆ. (2012). ಅಮೀರಬಾಯಿ ಕರ್ನಾಟಕಿ. ಅಭಿನವ ಪ್ರಕಾಶನ. ಬೆಂಗಳೂರು. ಪು.ಸಂ. 155
14. ಗಿರಿಜಾ ಲೋಕೇಶ್. ಜೋಗಿ (ನಿರೂಪಣೆ). (2021). ಗಿರಿಜಾ ಪರಸಂಗ. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. 193
15. ಗಿರಿಜಾ ಲೋಕೇಶ್. ಜೋಗಿ (ನಿರೂಪಣೆ). (2021). ಗಿರಿಜಾ ಪರಸಂಗ. ಅಂಕಿತ ಪುಸ್ತಕ. ಬೆಂಗಳೂರು. ಪು.ಸಂ. 195
16. ಪ್ರಕಾಶ ಗರುಡ. (2015). ಕಂಪನಿ ನಾಟಕ ಅರ್ಥಾತ್ ವೃತ್ತಿ ರಂಗಭೂಮಿ. ಯಾಜಿ ಪ್ರಕಾಶನ. ಹೊಸಪೇಟೆ. ಪು.ಸಂ. 249
17. ಜಯಶ್ರೀ ಬಿ. ಪ್ರೀತಿ ನಾಗರಾಜ್ (ನಿರೂಪಣೆ). (2019). ಕಣ್ಣಾ ಮುಚ್ಚೇ... ಕಾಡೆ ಗೂಡೇ... ಮನೋಹರ ಗ್ರಂಥ ಮಾಲಾ. ಧಾರವಾಡ. ಪು.ಸಂ. 37

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.